ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ದಿನಾಂಕ : 19-09-2014

**ಪತ್ರಿಕಾ ಪ್ರಕಟಣೆ**

## ಮ್ಯಾಂಡೊಲಿನ್ ವಾದಕ ಯು.ಶ್ರೀನಿವಾಸ್ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಸೆಪ್ಟೆಂಬರ್ 19**

ಸುಪ್ರಸಿದ್ಧ ಮ್ಯಾಂಡೊಲಿನ್ ವಾದಕ ಯು. ಶ್ರೀನಿವಾಸ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಪ್ರಪ್ರಥಮ ಬಾರಿಗೆ ಮ್ಯಾಂಡೊಲಿನ್‌ನಲ್ಲಿ ಅಳವಡಿಸಿ ಇಂಪಾದ ಸಂಗೀತವನ್ನು ವಿಶ್ವಕ್ಕೆ ಪರಿಚಯಿಸಿದ ಕೀರ್ತಿ ಶ್ರೀ ಶ್ರೀನಿವಾಸ್ ಅವರದಾಗಿದೆ. ಶ್ರೀ ಶ್ರೀನಿವಾಸ್ ಅವರ ಅಕಾಲಿಕ ನಿಧನದಿಂದ ಸಂಗೀತ ಕಾರಂಜಿ ಅರ್ಧಕ್ಕೆ ನಿಂತಂತಾಗಿದೆ ಎಂದು ಮುಖ್ಯಮಂತ್ರಿ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

ಡಿಪಿಎಂ:ಜಿಪಿಆರ್.